ಶ್ರೀ ಬಸವರಾಜ್ ಪಾಟೀಲ್:- ಇದು ನಿಯಮದ ಪ್ರಕಾರ ಅಸಿಸ್ಟೆಂಟ್ ಡೈರೆಕ್ಟರ್‌ರಿಂದ ಡೆಪ್ಯೂಟಿಡೈರೆಕ್ಟರ್‌ರವರಗೆ ಪ್ರಮೋಷನ್ ಮಾಡುವುದು ಸಧ್ಯದಲ್ಲಿ ನಮ್ಮ ಕಾನೂನಿನ ಪ್ರಕಾರ ಇಲ್ಲ. ಅದಕ್ಕಾಗಿ ಡಿಪಿಎಆರ್‌ಗೆ ಕಳುಹಿಸಬೇಕು. ಮುಂದೆ ಆ ನಿಯಮವನ್ನು ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕಾಗಿ ಸರ್ಕಾರದ ವಿಚಾರದಲ್ಲಿದೆ. ಯಾವ ರೀತಿಯಿಂದ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ನಿರ್ದಿಷ್ಟವಾಗಿ ಇಷ್ಟೇ ಸಮಯದಲ್ಲಿ ಅಂದರೆ ಒಂದು ತಿಂಗಳಲ್ಲಿ ಅಥವಾ ಎರಡು ತಿಂಗಳಲ್ಲಿ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಾನು ಕೂಡ ರಿಸರ್ವೇಷನ್ ಸಿಗಬೇಕೆಂದು ಇಚ್ಛೆಪಡುವವನಾಗಿದ್ದೇನೆ. ಆದಷ್ಟು ಬೇಗನೆ ಇದನ್ನು ಪರಿಶೀಲಿಸಲಾಗುವುದೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುತ್ತೇನೆ.

ಶ್ರೀಮತಿ ಮೋಟಮ್ಮ:- ಎರಡನೆಯದರಲ್ಲಿ ಪ್ರಸ್ತಾವನೆ ಬಂದಿದ್ದಲ್ಲಿ ಇನ್ನೂ ಬಡ್ತಿ ನೀಡದೇ ಇರುವುದಕ್ಕೆ ಕಾರಣ ಏನೆಂದು ಕೇಳಿದ್ದೇನೆ. ಇದು ಎಪಿಎಆರ್‌ಗೆ 18-12-90ಕ್ಕೆ ಹೋಗಿ ಬಂದಿದೆ. ಈ ಫೈಲು ಮಾನ್ಯ ಮಂತ್ರಿಗಳ ಕಡೆ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ಈ ಹರಿಜನ ಗಿರಿಜನರಿಗೆ ಬಡ್ತಿಯಲ್ಲಿ ಅನ್ಯಾಯವಾಗದ ಹಾಗೆ ಆದಷ್ಟು ಜಾಗ್ರತೆ ಇದನ್ನು ಪರಿಶೀಲನೆಮಾಡಿ ಒಂದು ತಿಂಗಳಲ್ಲೇ ಇವರಿಗೆ ಪ್ರಮೋಷನ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಸವರಾಜ್ ಪಾಟೀಲ್:- ನನಗೆ ತಿಳಿದ ಮಟ್ಟಿಗೆ ಈ ಫೈಲು ಡಿಪಿಎಆರ್‌ಗೆ ಇನ್ನೂ ಹೋಗಿಲ್ಲ, ಸೆಕ್ರೆಟರಿಯ ಲೆವೆಲ್‌ನಲ್ಲಿ ಚರ್ಚೆಯಲ್ಲಿದೆ. ಏಕೆಂದರೆ ಕಾನೂನನ್ನು ಬದಲಾವಣೆ ಮಾಡಬೇಕಾಗಿದೆ. ಅದಕ್ಕಾಗಿ ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಆದಷ್ಟು ಬೇಗನೆ ವಿಚಾರಮಾಡಿ ಇದನ್ನು ಪರಿಶೀಲಿಸಲಾಗುವುದೆಂದು ನಾನು ಹೇಳುತ್ತೇನೆ.

ನೆಲಮಂಗಲ ಮತಕ್ಷೇತ್ರದಲ್ಲಿರುವ ವ್ಯವಸಾಯದ ಜಮೀನಿನ ಬಗ್ಗೆ.

449 (1564)ಶ್ರೀ ಅಂಜನಮೂರ್ತಿ (ನೆಲಮಂಗಲ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ಮತಕ್ಷೇತ್ರದಲ್ಲಿ ಒಟ್ಟು ಎಷ್ಟು ವ್ಯವಸಾಯ ಕ್ಷೇತ್ರಗಳಿವೆ. ಅದರಲ್ಲಿ ಒಟ್ಟು ಎಷ್ಟು ಎಕರೆ ಜಮೀನಿರುವುದು (ಹೋಬಳಿ ಮತ್ತು ಗ್ರಾಮವಾರು ವಿವರ ನೀಡುವುದು);

ಆ) ಅವುಗಳ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಚಿಕ್ಕೇಗೌಡ(ಕೃಷಿ ಸಚಿವರು)-

ಅ) ನೆಲಮಂಗಲ ಮತಕ್ಷೇತ್ರದಲ್ಲಿ ಯಾವುದೇ ವ್ಯವಸಾಯ ಕ್ಷೇತ್ರಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ:- ನನ್ನ ಪ್ರಶ್ನೆ ಏನೆಂದರೆ ನೆಲಮಂಗಲ ಮತಕ್ಷೇತ್ರದಲ್ಲಿ ಒಟ್ಟು ಎಷ್ಟು ವ್ಯವಸಾಯ ಕ್ಷೇತ್ರಗಳಿವೆ. ಅದರಲ್ಲಿ ಒಟ್ಟು ಎಷ್ಟು ಜಮೀನಿರುವುದು(ಹೋಬಳಿ ಮತ್ತು ಗ್ರಾಮವಾರು ವಿವರ ನೀಡುವುದು)ಎಂಬುದಾಗಿ. ಅದಕ್ಕೆ ಉತ್ತರದಲ್ಲಿ ನೆಲಮಂಗಲ ಮತಕ್ಷೇತ್ರದಲ್ಲಿ ಯಾವುದೇ ವ್ಯವಸಾಯ ಕ್ಷೇತ್ರಗಳು ಇರುದಿಲ್ಲವೆಂದು ಹೇಳಿದ್ದಾರೆ. ಇದರಲ್ಲಿ ನನ್ನ ಮತ ಕ್ಷೇತ್ರಕ್ಕೆ ಸೇರಿರುವ ದಾಸನಪುರ ಹೋಬಳಿ ಅಡಕಮಾರನಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು 15-20 ಎಕರೆಯನ್ನು ಸುಮಾರು15-20 ವರ್ಷಗಳಿಂದ ಕಾಯ್ದಿರಿಸಲಾಗಿದೆ. ಅದಕ್ಕೆ ಈಗಾಗಲೇ ಸಾವಿರಾರು ರೂಪಾಯಿಯನ್ನು ಖರ್ಚುಮಾಡಿದ್ದಾರೆ. ಮೆಣಸಿನಕಾಯಿ ಹಾಕಿದ್ದಾರೆ. ಬೋರ್‌ವೆಲ್ ಹಾಕಿದ್ದಾರೆ. ಈಗ ಆ ಜಮೀನಿನಲ್ಲಿ ಕೆಲವು ಪಟ್ಟಭದ್ರಹಿತಾಸಕ್ತಿಗಳು ಒತ್ತುವರಿ ಮಾಡಿಕೊಂಡು 5-6

ಎಕರೆಯನ್ನು ಕಬಳಿಸಿದ್ದಾರೆ. ದುರಾದೃಷ್ಟವಶಾತ್ ಈಗ ಸಚಿವರು ಅಲ್ಲಿ ಯಾವುದೇ ವ್ಯವಸಾಯ ಕ್ಷೇತ್ರ ಇಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ, ಅದರ ಬಗ್ಗೆ ಪೂರ್ಣ ತನಿಖೆ ನಡೆಸಿ ಸರಿಯಾದ ಮಾಹಿತಿ ನೀಡಬೇಕೆಂದು ತಮ್ಮ ಮೂಲಕ ಅವರನ್ನು ಕೋರುತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ:- ಮಾನ್ಯ ಅಧ್ಯಕ್ಷರೇ ಶ್ರೀಯುತ ಅಂಜನಮೂರ್ತಿಯವರು ಎಷ್ಟು ಅಗ್ರಿಕಲ್ಚರ್ ಫಾರ್ಮ್ಸ್ ಇದೆ ಎಂದು ಕೇಳಿದ್ದಾರೆ. ಬಹುಶಃ ಅದರ ಅರ್ಥ ನಿಮ್ಮ ಮತಕ್ಷೇತ್ರದಲ್ಲಿ ಬಹಳಷ್ಟು ಇದೆ. ನೀವು ಅಗ್ರಿಕಲ್ಚರ್ ಫಾರ್ಮ್ಸ್ ಕೇಳಿದ್ದೀರೆಂದು ನಾನು ಭಾವಿಸಿದ್ದೇನೆ. ತಾವು ಹೇಳಿರುವಂತೆ ಅಡಕಮಾರನಹಳ್ಳಿಯಲ್ಲಿ ಸರ್ಕಾರದವರು ತೆಗೆದುಕೋಡು ವ್ಯವಸಾಯ ಇಲಾಖೆಯವರು ಅದಕ್ಕೆ ಫೆನ್ಸಿಂಗ್ ಮತ್ತು ಬೋರ್‌ವೆಲ್ ಹಾಕಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ರೀತಿ ಫೆನ್ಸಿಂಗ್ ಮತ್ತು ಬೋರ್‌ವೆಲ್ ಹಾಕಿ ಜಮೀನನ್ನು ವಶಕ್ಕೆ ತೆಗೆದುಕೊಂಡು ಯಾರಾದರೂ ಒತ್ತುವರಿ ಮಾಡಿಕ್ಕೊಂಡಿದ್ದರೆ, ಅದನ್ನು ತಕ್ಷಣ ಬಿಡುಗಡೆ ಮಾಡುವುದಕ್ಕೂ ಅಡಕಮಾರನಹಳ್ಳಿಯಲ್ಲಿರುವ ಜಮೀನಿನಲ್ಲಿ ವ್ಯವಸಾಯದ ಫಾರ್ಮ್ ಮಾಡಬಹುದೇ ಎನ್ನುವುದರ ಬಗ್ಗೆ ತಕ್ಷಣ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಜನಮೂರ್ತಿ:- ನೀವು ಇದರ ಬಗ್ಗೆ ಸ್ಪಷ್ಟ ನಿಲುವು ತೋರಿಸಿದರೆ, "ಆಶ್ರಯ" ಯೋಜನೆಯಡಿಯಲ್ಲಿ ಸೈಟ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆ ಜಮೀನು ನಿಮಗೆ ಸೇರಿದೆಯೇ, ಇಲ್ಲವೇ ಎನ್ನುವುದರ ಬಗ್ಗೆ ಮಾಹಿತಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ:- "ಆಶ್ರಯ" ಯೋಜನೆಯಡಿಯಲ್ಲೇ?

ಶ್ರೀ ಅಂಜನಮೂರ್ತಿ:- ನಿಮಗೆ ಆ ಜಮೀನು ಸೇರಿಲ್ಲವೆಂದರೆ, "ಆಶ್ರಯ" ಯೋಜನೆಯಲ್ಲಿ ಸೇರಿಸಿ, ಬಡವರಿಗೆ ಸೈಟನ್ನು ಹಂಚುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ:- ಆ ಜಮೀನು ನನಗೆ ಸೇರದೇ ಇದ್ದರೆ, ಬಹುಶಃ ಸಂಬಂಧಪಟ್ಟ ಯಾವ ಇಲಾಖೆ ಸೇರುತ್ತದೆಯೋ, ಅಲ್ಲಿಂದ ಅನುಮತಿ ಪಡೆದು "ಆಶ್ರಯ" ಯೋಜನೆಯಲ್ಲಿ ಸೈಟ್ ಮಾಡಿ ಕೊಡುದರಲ್ಲಿ ನಾನು ನಿಮ್ಮ ಜೊತೆಯಲ್ಲಿ ಭಾಗಿಯಾಗುತ್ತೇನೆ.

ರಾಜ್ಯದಲ್ಲಿ ಕಬ್ಬು ಉತ್ಪಾದನೆ.

452 (2134)ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿವರ್ಷ ಎಷ್ಟು ಲಕ್ಷ ಟನ್ ಕಬ್ಬಿನ ಬೆಳೆ ಬೆಳೆಯಲಾಗುವುದು?

ಆ) ಈ ಕಬ್ಬಿನ ಬೆಳೆಯನ್ನು ರಾಜ್ಯದ ಕೈಗಾರಿಕೆಗಳು ಎಷ್ಟು ಲಕ್ಷ ಟನ್ ಉಪಯೋಗಿಸುತ್ತವೆ ಹಾಗೂ ಹೊರ ರಾಜ್ಯಗಳಿಗೆ ನಮ್ಮ ರಾಜ್ಯದಿಂದ ಪ್ರತಿ ವರ್ಷ ಸರಬರಾಜಾಗುವ ಕಬ್ಬಿನ ಬೆಳೆ ಎಷ್ಟು;

ಇ) ನಮ್ಮ ರಾಜ್ಯದ ಕಬ್ಬನ್ನು ಖರೀದಿಸುವ ಹೊರ ರಾಜ್ಯಗಳು ಯಾವುವು?

ಶ್ರೀ ಎನ್. ಚಿಕ್ಕೇಗೌಡ(ಕೃಷಿ ಸಚಿವರು)-

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಸರಾಸರಿ 200 ಲಕ್ಷ ಟನ್ ಕಬ್ಬು ಉತ್ಪಾದನೆಯಾಗುತ್ತದೆ.

ಆ) ಈ ಕಬ್ಬಿನ ಬೆಳೆಯಲ್ಲಿ ರಾಜ್ಯದ ಕೈಗಾರಿಕೆಗಳು ಸುಮಾರು 175 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಉಪಯೋಗಿಸುತ್ತಿದೆ ಹಾಗೂ ಹೊರ ರಾಜ್ಯಕ್ಕೆ ಸುಮಾರು 10 ರಿಂದ 12 ಲಕ್ಷ ಮೆಟ್ರಿಕ್ ಟನ್ ಕಬ್ಬು ಸರಬರಾಜಾಗುತ್ತದೆ.